ಸಿದ್ಧಮಾಡಿ ತೋರಿಸಿದರು. ಜ್ಞಾನೇಶ್ವರಿಯ ಮೇಲಾದ ಹನ್ನೆರಡನೆಯ ಶತಮಾನದ ವಚನಕಾರರ, ಶರಣರ ಭಕ್ತಿ ಚಳವಳಿಯ ಪ್ರಭಾವ, ಕೇಶಿರಾಜನ 'ಶಬ್ದಮಣಿ ದರ್ಪಣ'ದ ದಟ್ಟವಾದ ಪ್ರಭಾವವನ್ನು ಪತ್ತೆ ಹಚ್ಚಿದರು. 'ಜ್ಞಾನೇಶ್ವರ ಕನ್ನಡ, ಸಂಸ್ಕೃತ ಎರಡರಲ್ಲೂ ಪಾರಂಗತನಾಗಿದ್ದ. ಒಂದು ಮೇರು ಕೃತಿಯನ್ನು ರಚಿಸುವಾಗ ಅದಕ್ಕೆ ಬೇಕಾಗುವ ಅಕ್ಕಪಕ್ಕ ಪರಿಸರದ ಭಾಷೆಯನ್ನು ಕವಿ ಅಭ್ಯಸಿಸಬೇಕಾಗುತ್ತದೆ. ಅಕ್ಕಪಕ್ಕ ಪರಿಸರದ ಭಾಷೆಗಳು ಕವಿಯ ಮೇಲೆ ಪ್ರಭಾವವನ್ನು ಬೀರುತ್ತವೆ. ಕನ್ನಡ ಮತ್ತು ಸಂಸ್ಕೃತ ಭಾಷೆಗಳ ನೆರವಿನಿಂದ ಆತ ಜ್ಞಾನೇಶ್ವರಿಯಂತಹ ಮೇರುಕೃತಿಯನ್ನು ರಚಿಸಿದ' ಎಂದು ರಂ.ಶಾ. ಹೇಳುತ್ತಾರೆ.

ಜ್ಞಾನೇಶ್ವರನು ತನ್ನ ಕೃತಿಯಲ್ಲಿ ಕನ್ನಡದ 2,000 ಶಬ್ದಗಳನ್ನು ಉಪಯೋಗಿಸಿಕೊಂಡಿದ್ದಾನೆಂದು ರಂ.ಶಾ. ಹೇಳುತ್ತಾರೆ. ರಂ.ಶಾ. ಕನ್ನಡದಲ್ಲಿ ಬರೆದ 'ಹಳಗನ್ನಡ ಮತ್ತು ಮರಾಠಿ' ಗ್ರಂಥ ಹಂಪಿಯ ಕನ್ನಡ ವಿಶ್ವವಿದ್ಯಾಲಯವು ಪ್ರಕಟಿಸಿದೆ. ಜ್ಞಾನೇಶ್ವರಿಯಲ್ಲಿಯ ಕನ್ನಡ ಪದಗಳು ಮರಾಠಿ ವಿದ್ವತ್‌ಲೋಕಕ್ಕೂ ತಿಳಿಯಬೇಕೆಂದು ರಂ.ಶಾ. ಕನ್ನಡದ ತಮ್ಮ ಕೃತಿಯನ್ನು ಮರಾಠಿಗೆ ಅನುವಾದಿಸಿ 'ಜ್ಞಾನೇಶ್ವರೀ ಕಾಲೀನ ಮರಾಠಿ ಭಾಷೆವರ ಕನ್ನಡಚಾ ಪ್ರಭಾವ' ಎಂಬ ಹೆಸರಿನಲ್ಲಿ ಪ್ರಕಟಿಸಿದರು. ಜ್ಞಾನೇಶ್ವರಿಯನ್ನು ಮರಾಠಿಯಲ್ಲಿ ಓದುವ, ಅರ್ಥೈಸುವ ಪ್ರತಿಯೊಬ್ಬನಿಗೂ ರಂ.ಶಾ. ಅವರ ಈ ಕೃತಿ ಒಂದು ಆಧಾರಗ್ರಂಥವಾಗಿದೆ.

ರಂ.ಶಾ. ಅವರ ಈ ಸಂಶೋಧನ ಕೃತಿ ಇಂಗ್ಲಿಷಿಗೂ ಬರಬೇಕೆಂದು ವಿಮರ್ಶಕ ಕೀರ್ತಿನಾಥ ಕುರ್ತಕೋಟಿಯವರು ಅಭಿಪ್ರಾಯಪಟ್ಟಿದ್ದರು. ರಂ.ಶಾ. ತಡ ಮಾಡದೆಯೇ ತಮ್ಮ ಸಂಶೋಧನೆಯನ್ನು ಇಂಗ್ಲಿಷಿಗೂ ಅನುವಾದಿಸಿ ಪ್ರಕಟಿಸಿದರು. ತಮ್ಮ ಕೃತಿಯಲ್ಲಿ ರಂ.ಶಾ. ವಿಪುಲವಾದ ಅಡಿಟಿಪ್ಪಣಿಗಳನ್ನು ನೀಡಿ ಕನ್ನಡದಿಂದ ಮರಾಠಿಗೆ ಹೋದ ಶಬ್ದದ ಅರ್ಥವನ್ನು ವಿಸ್ತರಿಸಿ ಹೇಳುತ್ತಾರೆ. ಚಿಕ್ಕಂದಿನಲ್ಲಿ ಕಲಿತ ಕನ್ನಡ ವ್ಯಾಕರಣವನ್ನು ಅವರು ಇಲ್ಲಿ ಯಥೇಚ್ಛವಾಗಿ ಉಪಯೋಗಿಸಿಕೊಂಡಿದ್ದಾರೆ.

ರಂ.ಶಾ. ಅವರ 'ಕನ್ನಡ ಜ್ಞಾನೇಶ್ವರಿ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನವು ಬಂದಿತು (2006). ಜ್ಞಾನೇಶ್ವರನು ಕನ್ನಡವನ್ನು ಮರಾಠಿಗೆ ತೆಗೆದುಕೊಂಡು ಹೋಗಿದ್ದ. ರಂ.ಶಾ. ಮರಾಠಿಯನ್ನು ಕನ್ನಡಕ್ಕೆ ತಂದರು.

ರಂ.ಶಾ. ಕೇವಲ ಸಂಶೋಧಕ ಸಾಹಿತಿಯಲ್ಲ; ಅವರು ಸೃಜನಶೀಲ ಲೇಖಕರೂ ಹೌದು. ವಿದ್ಯಾರ್ಥಿ ದೆಸೆಯಲ್ಲಿಯೇ ಅವರು ಪ್ರೇಮಚಂದರ ಕತೆಗಳನ್ನು ಹಿಂದಿಯಿಂದ ಕನ್ನಡಕ್ಕೆ ತಂದಿದ್ದರು. ಇಂಗ್ಲಿಷ್‌ನ ಹಾಸ್ಯ ಲೇಖಕ ಪಿ.ಜಿ. ವುಡ್‌ಹೌಸ್‌ರ ಸಾಹಿತ್ಯವನ್ನು ವಿದ್ಯಾರ್ಥಿಯಾಗಿದ್ದಾಗಲೇ ಓದಿದ್ದ ರಂ.ಶಾ. ಆ ಸಾಹಿತ್ಯದ ಪ್ರಭಾವದಿಂದಾಗಿ ಕನ್ನಡದಲ್ಲಿ ಅನೇಕ ಹರಟೆಗಳನ್ನು ಬರೆದಿದ್ದರು. ಈ ಹರಟೆಗಳು ಆಗಿನ ದಿನಪತ್ರಿಕೆಗಳು, ವಾರಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದವು.

ಆ ಕಾಲದಲ್ಲಿ ರಾವಬಹಾದ್ದೂರರ 'ಗ್ರಾಮಾಯಣ' ಕಾದಂಬರಿ ಎಲ್ಲೆಡೆಗೆ ಗಾಜಾಯಿಸುತ್ತಿತ್ತು. ಅದನ್ನೋದಿದಾಗ ರಂ.ಶಾ. ಅವರಿಗೆ ತನ್ನಲ್ಲಿಯೂ ಈ ತರಹದ ಕತೆಗಳಿವೆಯೆಂದು ಅನ್ನಿಸಹತ್ತಿತು. ರಾವಬಹಾದ್ದೂರರಂತೆಯೇ ತಾನೂ ಈ ಬಗೆಯ ಕಥಾನಕಗಳನ್ನು ಬರೆಯಬಲ್ಲೆನೆಂಬ ವಿಶ್ವಾಸ ಮೂಡಿತು. ಅದರ ಪರಿಣಾಮವಾಗಿ 'ಸಾವಿತ್ರಿ' ಕಾದಂಬರಿಯು ಬಂದಿತು. 'ಸಾವಿತ್ರಿ' ಕಾದಂಬರಿಯಲ್ಲಿ ರಂ.ಶಾ. ಹಳ್ಳಿಯ ಜೀವನ, ಅಲ್ಲಿಯ ಪಾಳೆಯಗಾರಿಕೆಯನ್ನು ಚಿತ್ರಿಸಿದ್ದಾರೆ. 'ಅದು ನಾನು ನೋಡಿದ ಒಂದು ಕುಟುಂಬದ ಕತೆ'ಯೆಂದು ಅವರು ನನ್ನೆದುರು ಹೇಳಿದ್ದರು. 'ಸಾವಿತ್ರಿ' ಕಾದಂಬರಿ 'ಸುಧಾ' ವಾರಪತ್ರಿಕೆ ಏರ್ಪಡಿಸಿದ ಕಾದಂಬರಿ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದ ಕಾದಂಬರಿ. ಅನಂತರ ಅದು 'ಸುಧಾ'ದಲ್ಲಿ ಧಾರಾವಾಹಿಯಾಗಿ ಪ್ರಕಟವಾಯಿತು. 'ಸಾವಿತ್ರಿ' ಕಾದಂಬರಿಯ ನಂತರ ಅವರ ಲೇಖನಿಯಿಂದ ಮೂಡಿದ್ದು 'ತಾಯಿಸಾಹೇಬ' ಕೃತಿ. ಇದು ಸ್ವಾತಂತ್ರ್ಯಾನಂತರ ಅಳಿಯುತ್ತಿರುವ